# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **57** |
| ಸದಸ್ಯರ ಹೆಸರು | ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 15.02.2022 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ. | ಕೊಡಗು ಜಿಲ್ಲೆಯಲ್ಲಿ ಬೇಡಿಕೆಗೆನುಗುಣವಾಗಿ ಮರಳು ದೊರೆಯದೆ ನಿರ್ಮಾಣ ಕಾಮಗಾರಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬೇಡಿಕೆ ಹಾಗೂ ಪೂರೈಕೆಗಳ ವಿವರ ನೀಡುವುದು). | • ಕೊಡಗು ಜಿಲ್ಲೆಯಲ್ಲಿ ಟೆಂಡರ್-ಕಂ-ಹರಾಜು ಮೂಲಕ ನದಿ ಪಾತ್ರದ 17 ಮರಳು ಬ್ಲಾಕ್‌ಗಳಿಗೆ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ಗುತ್ತಿಗೆ ಪ್ರದೇಶಗಳಿಂದ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿರುತ್ತದೆ.<br>ಮರಳು ಬ್ಲಾಕ್ ಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>• ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ 04 ಕ್ರಷರ್ ಘಟಕಗಳಲ್ಲಿ ಎಂ-ಸ್ಯಾಂಡ್‌ನ್ನು ಉತ್ಪಾದಿಸಿ, ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗುತ್ತಿದೆ.<br>• ಅಲ್ಲದೆ, ಕೊಡಗು ಜಿಲ್ಲೆಗೆ ನೆರೆಯ ಹಾಸನ ಮತ್ತು ಮೈಸೂರು ಜಿಲ್ಲೆಗಳಿಂದ ಎಂ-ಸ್ಯಾಂಡ್ ಪೂರೈಕೆಯಾಗುತ್ತಿರುತ್ತದೆ.<br>ಮೇಲ್ಕಂಡಂತೆ, ಕೊಡಗು ಜಿಲ್ಲೆಗೆ ಬೇಡಿಕೆಗನುಸಾರ ಮರಳು ಪೂರೈಕೆಯಾಗುತ್ತಿರುವುದರಿಂದ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಮರಳಿನ ಕೊರತೆ ಉಂಟಾಗಿರುವುದು ಕಂಡು ಬಂದಿರುವುದಿಲ್ಲ. |
| ಆ. | ಬಂದಿದ್ದಲ್ಲಿ, ಕೊಡಗು ಜಿಲ್ಲೆಯಲ್ಲಿ ನಿರ್ಮಾಣ ಕಾಮಗಾರಿಗಳಿಗೆ ಬೇಡಿಕೆಗನುಗುಣವಾಗಿ ಮರಳು ಪೂರೈಕೆಯಾಗುವಂತೆ ಮಾಡಲು ಇದುವರೆಗೆ ಕೈಗೊಳ್ಳಲಾಗಿರುವ ಕ್ರಮಗಳೇನು; | ಕೊಡಗು ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಬೇಡಿಕೆಗನುಸಾರ ಮರಳು ಪೂರೈಕೆಯಾಗುತ್ತಿರುತ್ತದೆ.<br>ಆದ್ದರಿಂದ, ಕೊಡಗು ಜಿಲ್ಲಾ ವ್ಯಾಪ್ತಿಯ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಮರಳು ಕೊರತೆಯ ಪ್ರಶ್ನೆ ಉದ್ಭವಿಸುವುದಿಲ್ಲ. |

. . . 2

| | | |
|---|---|---|
| ಇ. | ಕೊಡಗು ಜಿಲ್ಲೆಯಲ್ಲಿ ಬೇಡಿಕೆಗನುಗುಣವಾಗಿ ಮರಳು ಪೂರೈಕೆಯಾಗದೇ ಅಭಾವ ಕಂಡುಬಂದಿದ್ದಲ್ಲಿ, ಹೊಳೆಯಿಂದ ಮರಳು ತೆಗೆದು ನಿರ್ಮಾಣ ಕಾಮಗಾರಿಗಳಿಗೆ ದೊರೆಯುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಕೊಡಗು ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಬೇಡಿಕೆಗನುಸಾರ ಮರಳು ಪೂರೈಕೆಯಾಗುತ್ತಿರುತ್ತಿರುವುದರಿಂದ ಮರಳು ಕೊರತೆಯ ಪ್ರಶ್ನೆ ಉದ್ಭವಿಸುವುದಿಲ್ಲ.<br><br>ಆದಾಗ್ಯೂ ಹೊಸ ಮರಳು ನೀತಿ, 2020 ರಂತೆ I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಪ್ರಾಥಮಿಕ ಹಂತದಲ್ಲಿ 08 ಮರಳು ನಿಕ್ಷೇಪ ಪ್ರದೇಶಗಳನ್ನು ಗುರುತಿಸಲಾಗಿರುತ್ತದೆ.<br><br>ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಗುರುತಿಸಿರುವ ಮರಳು ನಿಕ್ಷೇಪ ಪ್ರದೇಶಗಳಿಗೆ ಜಿಲ್ಲಾ ಮರಳು ಸಮಿತಿಯಿಂದ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಅಧಿಸೂಚನೆ ಹೊರಡಿಸಿದ ನಂತರ ಸದರಿ ಮರಳು ನಿಕ್ಷೇಪ ಪ್ರದೇಶಗಳಿಂದ ಸ್ಥಳೀಯ ಕಾಮಗಾರಿಗಳಿಗೆ ಮರಳು ಪೂರೈಸಲು ಕ್ರಮ ವಹಿಸಲಾಗುವುದು.<br><br>ಮುಂದುವರೆದು, ಹೊಸ ಮರಳು ನೀತಿ, 2020 ರಂತೆ IV, V ಮತ್ತು VI ನೇ ಶ್ರೇಣಿಯಲ್ಲಿ ಲಭ್ಯವಿರುವ 11 ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದ್ದು, ಸದರಿ ಮರಳು ಬ್ಲಾಕ್ ಗಳನ್ನು ಮೆ\|\| ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಷನ್ ಲಿ., ಇವರಿಗೆ ಜಿಲ್ಲಾ ಮರಳು ಸಮಿತಿಯಿಂದ ಹಸ್ತಾಂತರಿಸಲು ತೀರ್ಮಾನಿಸಲಾಗಿದ್ದು, ಕ್ರಮವು ಪ್ರಗತಿ ಹಂತದಲ್ಲಿರುತ್ತದೆ.<br><br>ಮರಳು ಬ್ಲಾಕ್ ಗಳ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |
| ಈ | ಜಿಲ್ಲೆಯಲ್ಲಿ ಮಳೆಗಾಲ ಪ್ರಾರಂಭವಾದ ಕೂಡಲೇ ಮರಳು ತೆಗೆಯಲು ಸಾಧ್ಯವೇ ಆಗದ ಪರಿಸ್ಥಿತಿ ಇರುವುದರಿಂದ, ಈ ಸಲದ ಬೇಸಿಗೆ ಕಾಲದಲ್ಲೇ ಸಾಕಷ್ಟು ಮರಳು ದಾಸ್ತಾನು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಲ್ಲಿ, ಮರಳು, ಎಂ-ಸ್ಯಾಂಡ್ ಮತ್ತು ಇತರ ಖನಿಜಗಳನ್ನು ಉತ್ಪಾದನೆ ಮಾಡಿ ಸ್ಟಾಕ್ ಯಾರ್ಡ್ ಗಳಲ್ಲಿ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಗುತ್ತಿಗೆದಾರರುಗಳು ಬೇಸಿಗೆ ಕಾಲದಲ್ಲಿ ಮರಳು ಸಂಗ್ರಹಿಸಿ ಮಳೆಗಾಲದಲ್ಲಿ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆ ಮಾಡುತ್ತಿರುತ್ತಾರೆ. |

ಸಂಖ್ಯೆ ಸಿಐ -ಎಂಎಂಎನ್/32/2022

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ (1)

# Kodagu District Sand Quarry Leases Details

| Sl. No. | Name of the Taluk | Name of the Block | Extent (Acers) | Approximate estimated quantity of sand (MT /annum) | Date of Execution | Name of Sucessful Bidder | % of Bid | Bid amount @ rate Rs. 80/- Per M.T | Reservation |
|---|---|---|---|---|---|---|---|---|---|
| 1 | Madikeri | Napoklubethu-1 | 5.10 | 2750.00 | 19.12.2017 | Derik Josheph Rego | 2125.00 | 1700.00 | GN |
| 2 | Madikeri | Kelakodli-1 | 5.00 | 2500.00 | 21.12.2017 | PT Ramesh Venkatadri Traders | 1085.00 | 868.00 | GN |
| 3 | Somvarpet | Hampapur-1 | 10.00 | 5000.00 | 21.12.2017 | Vinod BS | 1015.00 | 812.00 | GN |
| 4 | Somvarpet | Hampapur-2 | 12.00 | 6250.00 | 21.12.2017 | Abdul Lathif | 1012.50 | 810.00 | GN |
| 5 | Somvarpet | Kelakodli-2 | 5.00 | 2500.00 | 22.12.2017 | Manjappa Huluga Bovi | 1010.00 | 808.00 | GN |
| 6 | Madikeri | Kadiyattur-1 | 5.20 | 2750.00 | 22.12.2017 | HA Mohammed Rafiq | 1007.50 | 806.00 | GN |
| 7 | Somvarpet | Kattepura-1 | 9.00 | 4500.00 | 22.12.2017 | R C Ganesha | 1017.50 | 814.00 | SC |
| 8 | Madikeri | B Badaga-1 | 5.00 | 2500.00 | 22.12.2017 | Zakeer Hussain | 1092.50 | 874.00 | GN |
| 9 | Somvarpet | Shanthapura, Arakanahalli | 12.00 | 6250.00 | 22.12.2017 | Zakeer Hussain | 1027.50 | 822.00 | GN |
| 10 | Somvarpet | Malagana Halli-1 | 12.00 | 6000.00 | 22.12.2017 | B V Manjunatha | 1040.00 | 832.00 | GN |
| 11 | Somvarpet | Nelli Hudikeri-2 | 10.00 | 5000.00 | 22.12.2017 | Sathish H N | 1035.00 | 828.00 | GN |
| 12 | Virajpet | Guyya-1 | 9.75 | 4650.00 | 22.12.2017 | Sathish H N | 1847.50 | 1478.00 | GN |
| 13 | Madikeri | Kattemadu-1 | 5.00 | 3750.00 | 26.12.2017 | G K Thotappa Nayaka | 320.00 | 256.00 | ST |
| 14 | Madikeri | Yemmemadu-2 | 5.00 | 3750.00 | 30.12.2017 | Parvathaiah | 1050.00 | 840.00 | SC |
| 15 | Madikeri | Yemmemadu-1 | 5.00 | 3750.00 | 30.12.2017 | Ramappa Nagarajappa | 360.00 | 288.00 | ST |
| 16 | Madikeri | Ballamavati | 6.00 | 3000.00 | 30.12.2017 | MKM Enterprises | 2617.00 | 2093.60 | GN |
| 17 | Madikeri | Kattemadu-1A | 5.00 | 3750.00 | 30.12.2017 | PT Ramesh Venkatadri Traders | 1020.00 | 816.00 | GN |

Deputy Director (Min. Admn)
Dept. of Mines & Geology
Bangalore-560001

ಅನುಬಂಧ -

# ಹೊಸ ಮರಳು ನೀತಿ-2020 ರಂತೆ 1ನೇ, 2ನೇ ಮತ್ತು 3ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಗುರುತಿಸಿ ಸಂಬಂಧಿಸಿದ ಗ್ರಾಮ ಪಂಚಾಯತ್‌ಗಳಿಗೆ ವಹಿಸುವ ಬಗ್ಗೆ.

| ಕ್ರ.ಸಂ | ತಾಲ್ಲೂಕು | ಗ್ರಾಮ | ವಿಸ್ತೀರ್ಣ (ಎಕರೆಗಳಲ್ಲಿ) | ಅಂದಾಜು ಪ್ರಮಾಣ (ಮೆ.ಟನ್) |
|---|---|---|---|---|
| 01 | ಮಡಿಕೇರಿ | ನೇರೆಗುಂಡಿ ಬಲಮುರಿ | 4.90 | 600 |
| 02 | ಸೋಮವಾರಪೇಟೆ | ಬೆಂಬಳ್ಳೂರು (ಬಿಳಹ) | 3.00 | 700 |
| 03 | | ಮಾದ್ರೆ | 2.50 | 500 |
| 04 | ವಿರಾಜಪೇಟೆ | ಕದನೂರು | 1.30 | 350 |
| 05 | | ಹೆಮ್ಮಾಡು | 1.49 | 200 |
| 06 | | ಬೊಳ್ಳುಮಾಡು | 0.75 | 150 |
| 07 | ಪೊನ್ನಂಪೇಟೆ | ಬಿರುನಾಣಿ (ಹುದಿಕೇರಿ ) | 5.40 | 650 |
| 08 | | ಹೈಸೊಡ್ಲೂರು (ಹುದಿಕೇರಿ) | 2.75 | 400 |
| ಒಟ್ಟು | | | | 3550 |

ಹಿರಿಯ ಭೂವಿಜ್ಞಾನಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ (ಖನಿಜ)
ಮಡಿಕೇರಿ, ಕೊಡಗು ಜಿಲ್ಲೆ. 09/02/22

Deputy Director (Min. Admn)
Dept. of Mines & Geology
Bangalore-560001

ಅನುಬಂಧ - 3

## ಹೊಸ ಮರಳು ನೀತಿ 2020 ರಂತೆ IV, V ಮತ್ತು VI ಶ್ರೇಣಿಯಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಸಾರ್ವಜನಿಕ ಮತ್ತು ಸರ್ಕಾರಿ ಕಾಮಗಾರಿ ನಿರ್ವಹಿಸುವ ಇಲಾಖೆಗಳಿಗೆ ಮೀಸಲಿರಿಸಲು ಬಾಕಿ ಇರುವ ಮರಳು ಬ್ಲಾಕ್‌ಗಳ ವಿವರ

| ಕ್ರ.ಸಂ | ತಾಲ್ಲೂಕು | ಬ್ಲಾಕ್‌ನ ಹೆಸರು | ಸರ್ವೆ ನಂ | ವಿಸ್ತೀರ್ಣ | ಪ್ರಮಾಣ (MT) |
|---|---|---|---|---|---|
| 1 | ಸೋಮವಾರಪೇಟೆ | ಮಲಗನಹಳ್ಳಿ ಬ್ಲಾಕ್-II | 31/1 | 12.00 | 4800 |
| 2 | ಮಡಿಕೇರಿ | ನಾಪೋಕ್ಲು | 42, 43, 44, 45, 152/1 & 137 | 5.20 | 2200 |
| 3 | ಸೋಮವಾರಪೇಟೆ | ಹೊಸಳ್ಳಿ | 39/1, 38, 40/2, 44, 49/1, 49/2, 50/1, 50/2, 51, 52, 53, 62 | 5.00 | 2000 |
| 4 | ವಿರಾಜಪೇಟೆ | ಹಾಲಗುಂದ | 1/3, 4, 5, 70, 71, 73/1, 3 | 6.30 | 2520 |
| 5 | ಕುಶಾಲನಗರ | ಗರಗಂದೂರು | 124, 107, 206, 171, 169, 168 | 8.0 | 3200 |
| 6 | ಪೊನ್ನಂಪೇಟೆ | ಕೊಟ್ಟಗೇರಿ | 24, 25, 25/1 | 7.00 | 2800 |
| 7 | ಕುಶಾಲನಗರ | ಶಿರಂಗಾಲ | 243, 245, 250 | 9.00 | 3600 |
| 8 | ಸೋಮವಾರಪೇಟೆ | ಜಂಬೂರು | 44, 45, 33/1 | 6.20 | 2500 |
| 9 | ಪೊನ್ನಂಪೇಟೆ | ಕೋತೂರು | 36/1, 74/1, 53/3 & 35 | 5.20 | 2120 |
| 10 | ಕುಶಾಲನಗರ | ನೆಲ್ಲಿಹುದಿಕೇರಿ-1 | 186, 179, 183, 180 | 7.20 | 2880 |
| 11 | ಮಡಿಕೇರಿ | ಬೇತು | 3, 18/1 | 6.20 | 2600 |
| | | ಒಟ್ಟು | | | **31220** |

CI-32-MMN-2022

Deputy Director (Min. Admn)
Dept. of Mines & Geology

ಹಿರಿಯ ಭೂವಿಜ್ಞಾನಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ (ಖನಿದ)